ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—೧೯೮೬ನೇ ಇಸವಿಯ ಕರ್ನಾಟಕ ವಿಧಾನಮಂಡಲದ ವೇತನ, ನಿವೃತ್ತಿವೇತನ ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೬ನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ವೇತನ, ನಿವೃತ್ತಿ ವೇತನ ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಂಸೂದೆಗ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಭಿಕ್ಷಾಟನಾ (ತಿದ್ದುಪಡಿ) ವಿಧೇಯಕ—೧೯೮೮

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಭಿಕ್ಷಾಟನಾ (ತಿದ್ದುಪಡಿ) ವಿಧೇಯಕ-೧೯೮೮ನ್ನು ಪರ್ಯಾಲೋಚಿಸಬೇಕೆಂದು ಕೊರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಈಗಿನ ಕಾನೂನು ಪ್ರಕಾರ ಸರ್ಕಾರಕ್ಕೆ ಇರತಕ್ಕ ಅಧಿಕಾರವನ್ನು ಛೇರ್ಮನ್ನರಿಗೆ ಕೊಡುತ್ತಿದ್ದೇವೆ. ಸಭೆಯು ಇದನ್ನು ಒಪ್ಪುತ್ತದೆಂದು ನನ್ನ ಭಾವನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ ''ಕರ್ನಾಟಕ ಭಿಕ್ಷಾಟನಾ (ತಿದ್ದುಪಡಿ) ವಿಧೇಯಕ-೧೯೮೮ವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ಮತ್ತು ೩

ಅಧ್ಯಕ್ಷರು.—''ಖಂಡ ೨ ಮತ್ತು ೩ ಈ ವಿಧೇಯಕದ ಅಂಗವಾಗಿರುತ್ತವೆ.

ಪ್ರಸ್ತಾವೆ ಅಂಗೀಕರಿಸಲ್ಪಟ್ಟಿತು

(ಖಂಡ ೨ ಮತ್ತು ೩ ಈ ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ಮೊದಲ ಖಂಡ ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—ಕರ್ನಾಟಕ ಭಿಕ್ಷಾಟನಾ (ತಿದ್ದುಪಡಿ) ವಿಧೇಯಕ–೧೯೮೮ನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ಕರ್ನಾಟಕ ಭಿಕ್ಷಾಟನಾ (ತಿದ್ದುಪಡಿ) ವಿಧೇಯಕ–೧೯೮೮ನ್ನು ತಿದ್ದುಪಡಿ ಮಾಡಿರಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೮

ಪರ್ಯಾಲೋಚನಾ ಪ್ರಸಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ದಿಮ್ದು ಪಡಿ) ವಿಧೇಯಕ–೧೯೮೮ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ೧೯೮೦ನೇ ಇಸವಿ ಏಪ್ರಿಲ್‌ಗೆ ಮೊದಲು ಇದ್ದ ತೆರಿಗೆಯ ಮಟ್ಟವನ್ನೇ ಈಗ ಈ ತಿದ್ದುಪಡಿ ಮಸೂದೆ ಮುಖಾಂತರ ತರುವ ಪ್ರಯತ್ನ ೧೯೮೮ರ ಏಪ್ರಿಲ್ ನಂತರ ತೆರಿಗೆ ಹಂತಗಳನ್ನು ಹೆಚ್ಚು ಮಾಡಿದ್ದೇವೆ. ನಂತರ ಈ ಉದ್ಯಮಕ್ಕೆ ಸಂಬಂಧ ಪಟ್ಟವರು ನೆರೆ ರಾಜ್ಯಗಳಲ್ಲಿ ತೆರಿಗೆ ಕಡಿಮೆ ಇದ್ದು ನೀವು ಜಾಸ್ತಿ ಮಾಡಿರುವುದರಿಂದ ನಮ್ಮ ಉದ್ಯಮಕ್ಕೆ ತೊಂದರೆ ಆಗುವುದರೆ ಜೊತೆಗೆ ವ್ಯವಹಾರ ಕೂಡಾ ಬೇರೆ ರಾಜ್ಯಗಳಿಗೆ ಹೋಗ ಬಹುದಾದ್ದರಿಂದ ತೆರಿಗೆ ಕಡಿಮೆ ಮಾಡಬೇಕೆಂದು ಸರ್ಕಾರಕ್ಕೆ ಮನವಿ ಕೊಟ್ಟರು. ಅದನ್ನು ಗಮನದಲ್ಲಿ ಇಟ್ಟುಕೊಂಡು ತೆರಿಗೆ ಹಂತ ಕಡಿಮೆ ಮಾಡತಕ್ಕ ತಿದ್ದುಪಡಿ ತಂದಿದ್ದೇವೆ, ಇದನ್ನು ಈಗಾಗಲೇ ಜಾರಿಗೆ ಕೊಟ್ಟಿದ್ದು ಕೇವಲ ರ್ಯಾಟಿಫಿಕೇಷನ್‌ಗೆ ಇಲ್ಲಿ ತಂದಿದ್ದೇವೆ. ಆಯವ್ಯಯ ಕಾಲದಲ್ಲಿ ತೆರಿಗೆಗಳನ್ನು ಜಾಸ್ತಿ ಮಾಡತಕ್ಕ ಪ್ರಯತ್ನ ಗಳಾಗುತ್ತವೆ. ಅನೇಕ ಸಮಯದಲ್ಲಿ ಇಲ್ಲಿನ ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ಗಮನದಲ್ಲಿಟ್ಟು ತೆರಿಗೆ ಮಟ್ಟ ಕಡಿಮೆ ಮಾಡಿರತಕ್ಕ ನಿದರ್ಶನಗಳು ಮಾನ್ಯ ಮೊಯಿಲಿಯವರ ಕಾಲದಲ್ಲೂ ನಡೆದಿವೆ. ಇದು ಆಪ್ರಕೃತ ವಿಚಾರವೇನಲ್ಲ ಇದು ಅವ್ಯಾಹತವಾಗಿ ನಡೆದುಕೊಂಡು ಬಂದಿದೆ ಅನೇಕ ಸಂದರ್ಭಗಳಲ್ಲಿ ಕೇಂದ್ರವಾಗಲಿ, ರಾಜ್ಯವಾಗಲೀ ವಿಧಾನಮಂಡಲ ಅಧಿವೇಶನ ಇಲ್ಲದೇ ಇರತಕ್ಕ ಸಮಯದಲ್ಲಿ ಆದ್ಯಾ ದೇಶಗಳ ಮುಖಾಂತ ಕಾನೂನು ಜಾರಿಗೆ ತಂದಿರುವುದನ್ನು ನಾವು ಓದಿದ್ದೇವೆ. ತೆರಿಗೆಗಳ ಮೇಲೆ ಪ್ರತಿಕ್ರಿಯೆ ಬಂದಾಗ ಅದನ್ನು ಗಮನಿಸಿ ತೆರಿಗೆಯ ಹಂತಗಳನ್ನು ಹೆಚ್ಚು ಕಡಿಮೆ ಮಾಡಿರುವುದು ಅಪೇಕ್ಷಿತವೇನಲ್ಲ ಇದನ್ನು ಮಾನ್ಯ ಸದಸ್ಯರು ತಿಳಿಯದೇ ಇರತಕ್ಕ ವಿಷಯವಲ್ಲ ಮಾನ್ಯ ಮೊಯಿಲಿಯವರಿಗೆ ಇದನ್ನೆಲ್ಲಾ ನಾನು ನೆನಪು ಮಾಡಿಕೊಡುವ ಅಪಶ್ಯಕತೆಯಿಲ್ಲ ಅವರೂ ಆರ್ಥ ಮಂತ್ರಿಗಳಾಗಿದ್ದಾಗ ಕೂಡಾ ಈ ಎಲ್ಲಾ ಎಕ್ಸರ್‌ಸೈಸ್ ನಡೆದಿದೆ.

ಕೇಂದ್ರ ಸರ್ಕಾರದವರು ಈ ರೀತಿ ಮಾಡಿದ್ದಾರೆ. ಒಂದು ವರ್ಷದ ಹಿಂದೆ ಪೆಟ್ರೋಲ್ ಬೆಲೆ ಜಾಸ್ತಿಯಾಯಿತು ಎಂದೇ ಪಕ್ಷದ ವರಿಷ್ಠರೆಲ್ಲ ಸೇರಿ ಜಾಸ್ತಿ ಮಾಡಿದ್ದನ್ನು ಕಡಿಮೆ ಮಾಡಿದ್ದು ತಮಗೆ ಗೊತ್ತಿಲ್ಲದೆ ಇಲ್ಲ. ಉದ್ಯಮಗಳಲ್ಲಿರುವವರಿಗೆ ತೊಂದರೆಯಾಗಿದೆ ಎನ್ನುವ ಹಿನ್ನೆಲೆಯಲ್ಲಿ ಕಡಿಮೆ ಮಾಡತಕ್ಕ ಪ್ರಯತ್ನ ಮಾಡಿದ್ದೇವೆ. ಸನ್ಮಾನ್ಯ ಸದಸ್ಯರು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತೆರಿಗೆಯನ್ನು ಕಡಿಮೆ ಮಾಡತಕ್ಕದ್ದು ಸಾರಿಗೆ ವ್ಯವಸ್ಥೆಗೆ ಸ್ವಲ್ಪ ಸಂಲಲಿತವಾಗಿ ಒಂದು ತೀರ್ಮಾನವನ್ನು ಮಾಡತಕ್ಕದ್ದು ಏನಿದೆ ಅದನ್ನು ಸ್ವಾಗತ ಮಾಡಬೇಕು ಈ ಸದನವನ್ನು ಬಹಳ ಹಗುರವಾಗಿ ಸರ್ಕಾರದವರು ಕಾಣಬಾರದು. ಬಡ್ಜೆಟ್ ಮಾರ್ಚಿ ಫರ್ಸ್ಟ್‌ಗೆ